ಉಪಾಧ್ಯಕ್ಷರು :– ಮಾನ್ಯ ಎಂ.ವಿ.ನಾಗರಾಜ್‌ರವರೇ, ಮಾನ್ಯ ಸಚಿವರು ಬಂದ ತಕ್ಷಣ ನಿಮ್ಮ ಪ್ರಶ್ನೆಯನ್ನು ತೆಗೆದುಕೊಳ್ಳುತ್ತೇನೆ. ಈಗ ಮುಂದಿನ ಪ್ರಶ್ನೆ ತೆಗೆದುಕೊಳ್ಳುತ್ತೇನೆ.

ಕಂದಾಯ ಭವನಕ್ಕೆ ಪೀಠೋಪಕರಣ ಒದಗಿಸುವುದು.

(45) : 223

ಶ್ರೀ ರಾಜು.ಕೆ (ರಾಮನಗರ)

(ಮಾನ್ಯ ಉಪ ಮುಖ್ಯಮಂತ್ರಿಗಳು)

(ಅ) ರಾಮನಗರ ಜಿಲ್ಲಾ ಕೇಂದ್ರವಾಗಿ ಸುಮಾರು 4 ವರ್ಷಗಳೇ ಕಳೆದರೂ ಕಂದಾಯ ಭವನದ ಕಛೇರಿಯಲ್ಲಿ ಪೀಠೋಪಕರಣಗಳು ಇಲ್ಲದೆ ಕೆಲಸಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ)ಹಾಗಿದ್ದಲ್ಲಿ, ಈ ಭವನಕ್ಕೆ ಪೀಠೋಪಕರಣಗಳನ್ನು ಒದಗಿಸಲು ಸರ್ಕಾರ ಯಾವ ರೀತಿಯ ಕ್ರಮ ಕೈಗೊಳ್ಳಲಾಗುವುದು (ಮಾಹಿತಿ ನೀಡುವುದು)?

ಶ್ರೀ ಕೆ.ಎಸ್. ಈಶ್ವರಪ್ಪ

(ಅ) 2011–12ನೇ ಸಾಲಿನಲ್ಲಿ ಕಂದಾಯ ಭವನಕ್ಕೆ ರೂ.13.75 ಲಕ್ಷಗಳ ಪೀಠೋಪಕರಣ ಖರೀದಿಸಲಾಗಿರುತ್ತದೆ. ಕಛೇರಿ ಕೆಲಸಕ್ಕೆ ಯಾವುದೇ ತೊಂದರೆಯಾಗಿರುವುದಿಲ್ಲ.

(ಆ) ಅನ್ವಯಿಸುವುದಿಲ್ಲ.

ಶ್ರೀ ಕೆ. ರಾಜು:–ಮಾನ್ಯಉಪಾಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ಶಾಸಕನಾಗಿರುವ ಈ ಮೂರುವರೆ ವರ್ಷದಲ್ಲಿ ಸುಮಾರು ಮೂರು ಸಾರಿ ಈ ಪ್ರಶ್ನೆಯನ್ನು ಕೇಳಿದ್ದೇನೆ. ರಾಮನಗರ ಜಿಲ್ಲಾ ಕೇಂದ್ರವಾಗಿ ಸುಮಾರು 4 ವರ್ಷಗಳಾಗಿದ್ದು, ರಾಮನಗರ ಜಿಲ್ಲೆಯ ಕಂದಾಯ ಭವನ ಮತ್ತು ಪೊಲೀಸ್ ಭವನ ಹಗೂ ಪಂಚಾಯತ್ ಭವನವನ್ನು ಪ್ರಾರಂಭ ಮಾಡಿ ಮೂರು ವರ್ಷಗಳಾಗಿದ್ದರೂ ಕೂಡ ಅಲ್ಲಿ ಇದುವರೆಗೆ ಪೀಠೋಪಕರಣಗಳು ಆಗಿಲ್ಲ. ಭವನದ ಒಳಗಡೆ interior decoration ಮಾಡುವುದಕ್ಕೆ ಏಕೆ ಹಣವನ್ನು ಮಂಜೂರು ಮಾಡಿಲ್ಲವೆಂದು ಪ್ರಶ್ನೆಯನ್ನು ಕೇಳಿದ್ದೆ. ನನ್ನ ಪ್ರಶ್ನೆಗೆ

ಏನು ಉತ್ತರ ಕೊಟ್ಟಿದ್ದಾರೆಂದರೆ, ಎರಡು ವರ್ಷಗಳ ಹಿಂದೆ 8.5 ಕೋಟಿ ರೂಪಾಯಿ ಇದಕ್ಕಾಗಿ ಅನುದಾನ ಬೇಕೆಂದು ಮುಖ್ಯ ಇಂಜಿನಿಯರ್ ಮತ್ತು ಜಿಲ್ಲಾ ಮಂತ್ರಿಗಳು ಪತ್ರ ಬರೆದಿದ್ದರು. ಆದರೆ, ಈಗ ಕೇವಲ 13.75 ಲಕ್ಷ ರೂಪಾಯಿಯಷ್ಟು ಅನುದಾನವನ್ನು ಕೊಟ್ಟಿದಾರೆ. 8.5 ಕೋಟಿ ರೂಪಾಯಿ–ಗಳನ್ನು ಕೇಳಿದರೆ ಕೇವಲ 13.75 ಲಕ್ಷ ರೂಪಾಯಿ ಕೊಟ್ಟಿದ್ದೇವೆಂದು ಉತ್ತರ ಕೊಟ್ಟಿದ್ದಾರೆ. 13.75 ಲಕ್ಷ ರೂಪಾಯಿ ಕೊಟ್ಟರೆ ಹೇಗೆ? ಪೀಠೋಪಕರಣಗಳನ್ನು ಒದಗಿಸಲು ಸರ್ಕಾರ ಯಾವ ರೀತಿಯ ಕ್ರಮವನ್ನು ಕೈಗೊಳ್ಳಲಾಗುವುದೆಂದು ಎರಡನೇ ಪ್ರಶ್ನೆ ಕೇಳಿದ್ದೇನೆ. ಅನ್ವಯಿಸುವುದಿಲ್ಲವೆಂದು ಉತ್ತರವನ್ನು ಕೊಟ್ಟಿದ್ದಾರೆ.ಅನ್ವಯಿಸುವುದಿಲ್ಲವೆಂದರೆ ಏನರ್ಥ ಎಂಬುದು ನನಗೆ ಗೊತ್ತಾಗಲಿಲ್ಲ. ಶ್ರೀ ಕುಮಾರಸ್ವಾಮಿ ಸನ್ಮಾನ್ಯ ಮುಖ್ಯ ಮಂತ್ರಿಗಳಾದ ಮೇಲೆ ತಾಲ್ಲೂಕು ಕೇಂದ್ರವನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಿದ ನಂತರ ದಿನಾಂಕ:22–11–2010ರಲ್ಲಿ ಈ ಮೂರು ಭವನವನ್ನು ಉದ್ಘಾಟನೆ ಮಾಡಿದ ನಂತರ ಜಿಲ್ಲಾ ಮಂತ್ರಿಗಳಾಗಿದ್ದ ಮಾನ್ಯ ಬಚ್ಚೇಗೌಡರು ಮಾನ್ಯ ಮುಖ್ಯ ಮಂತ್ರಿಯವರಿಗೆ ಮತ್ತು ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ದಿನಾಂಕ:1–12–2010ರಲ್ಲಿ ಒಂದು ಪತ್ರ ಬರೆದರು. ಇವರಿಗೆಲ್ಲ ಪತ್ರ ಬರೆದರೂ ಕೂಡ ಇದುವರೆಗೆ ಹಣ ಬಿಡುಗಡೆ ಮಾಡಿಲ್ಲ. ಕಳೆದ ವರ್ಷ ಸನ್ಮಾನ್ಯ ಸದಾನಂದಗೌಡರು ಮುಖ್ಯಮಂತ್ರಿ–ಯಾಗಿದ್ದಂಥ ಸಂದರ್ಭದಲ್ಲಿ ದಿನಾಂಕ:13–09–2011ನೇ ತಾರೀಖು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೆ ಒಂದು ನೋಟ್ ಹಾಕಿ ಕೂಡಲೇ ಉಳಿಕೆ ಹಣವನ್ನು ಬಿಡುಗಡೆ ಮಾಡಿ ಎಂದು ಬರೆದಿದ್ದಾರೆ. ಜಿಲ್ಲಾ ಮಂತ್ರಿಗಳು ಎರಡು ಸಾರಿ ಪತ್ರವನ್ನು ಬರೆದಿದ್ದಾರೆ. ಹಾಗೆಯೇ, ಮಾನ್ಯ ಮುಖ್ಯಮಂತ್ರಿಯವರೂ ಸಹ ಪತ್ರ ಬರೆದಿದ್ದಾರೆ. ಇಷ್ಟೆಲ್ಲ ಪತ್ರ ಬರೆದರೂ ಕೂಡ ಅಂದರೆ, ಒಂದು ಮುಕ್ಕಾಲು ವರ್ಷಗಳಾದರೂ ಇಲ್ಲಿಯವರೆಗೆ ಯಾವುದೇ ಹಣವನ್ನು ಬಿಡುಗಡೆ ಮಾಡಿಲ್ಲ. ನನಗೆ ತುಂಬಾ ಸಮಸ್ಯೆಯ ವಿಷಯವಾಗಿದೆ. ನಮ್ಮ ರಾಮನಗರದಲ್ಲಿನ ನೀವು ಕಟ್ಟಡ ನೋಡಿರಬಹುದು. ಜಿಲ್ಲಾ ಪಂಚಾಯಿತಿ ಭವನ ಇರಬಹುದು ಕಂದಾಯ ಭವನ ಇರಬಹುದು. ಇವು ಮೂರು–ನಾಲ್ಕು ಅಂತಸ್ತುಗಳದ್ದು ಇವೆ. ಇದುವರೆಗೆ ಅಲ್ಲಿಗೆ ಒಂದು ಲಿಫ್ಟ್ ಹಾಕಿಲ್ಲ. ವಯಸ್ಸಾದ ಯಾರೇ ರೈತರುಗಳು ಬಂದರೆ ಮೂರನೆಯ ಮಹಡಿಗೆ ಹೋಗಲಿಕ್ಕೆ ಸಾಧ್ಯವಿಲ್ಲ. ಆ ಮಟ್ಟಕ್ಕೆ ಇವತ್ತು ವಾತಾವರಣ ಇದೆ. ಆದರೆ ಇಂತಹ ವಾತಾವರಣ ಇದ್ದರೂ ಕೂಡ,

ಉದ್ಘಾಟನೆಯಾಗಿ ಮೂರು ವರ್ಷವಾದರೂ ಕೂಡ ಯಾವುದೇ ಪ್ರಶ್ನೆ ಕೇಳಿದರೂ ಉದ್ಭವಿಸುವುದಿಲ್ಲವೆಂದು ಹಾರಿಕೆ ಉತ್ತರವನ್ನು ಕೊಟ್ಟಿರುತ್ತಾರೆ. ದಯಮಾಡಿ ಸನದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳುಉತ್ತರವನ್ನು ಕೊಡಬೇಕು. ಜೊತೆಗೆ ಉತ್ತರವನ್ನು ಕೊಡುವುದಕ್ಕಿಂತ ಹೆಚ್ಚಾಗಿ ನಾವೆಲ್ಲರೂ ಮೂರು ವರ್ಷದಿಂದ ಭಿಕ್ಷೆ ಬೇಡಿದಂತೆ ಬೇಡಿದರೂ ಕೂಡ ರಾಮನಗರ ಜಿಲ್ಲೆಗೆ ಮಲತಾಯಿ ಧೋರಣೆಯನ್ನು ತಾಳುತ್ತಿದ್ದಾರೆ. ದಯಮಾಡಿ ಈ ಸದನದಲ್ಲಿಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ಇಬ್ಬರಲ್ಲಿ ಯಾರಾದರೂ ಕೂಡ ಸರಿಯಾದ ಕರಾರುವಕ್ಕಾದ ಉತ್ತರವನ್ನು ಕೊಟ್ಟು ಒಂದು ಅಥವಾ ಎರಡು ತಿಂಗಳೊಳಗೆ ಆ ಕೆಲಸವನ್ನು ಮಾಡಿ ಮುಗಿಸಬೇಕೆಂದು ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ. ನಾನು ಈಗಾಗಲೇ ಹೇಳಿದಂತೆ ಮೂರು ಸಾರಿ ಪ್ರಶ್ನೆಯನ್ನು ಕೇಳಿದ್ದೇನೆ. ಸಮರ್ಪಕವಾದ ಉತ್ತರ ಬರಲಿಲ್ಲ. ಈ ಸಭೆಯಲ್ಲಿ ತಮ್ಮ ಮೂಲಕ ಸರ್ಕಾರಕ್ಕೆ ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ. ದಯವಿಟ್ಟು ಈ ಕೆಲಸ ಆಗಬೇ–ಕೆಂದು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷರೆ, 2012–13ನೇ ಸಾಲಿಗೆ ಇಡೀ ರಾಜ್ಯಕ್ಕೆ ಇಟ್ಟಿರುವ ಹಣ ಒಟ್ಟು 25 ಕೋಟಿ ರೂ.ಗಳು. ಇವರು ರಾಮನಗರಕ್ಕೆ ಎಂಟೂವರೆ ಕೋಟಿ ರೂ.ಗಳು ಬೇಕು ಎಂದು ಕೇಳಿರುತ್ತೇನೆಂದು ಹೇಳುತ್ತಿದ್ದಾರೆ. ನಾನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳನ್ನು ಮತ್ತು ಶಾಸಕರನ್ನು ಕರೆಸಿ ಎಷ್ಟು ಅವಶ್ಯಕತೆ ಇದೆ ನೋಡಿ ಅಷ್ಟು ಹಣವನ್ನು ಕೊಡುತ್ತೇವೆ. ಏಕೆಂದರೆ 2012–13ನೇ ಸಾಲಿಗೆ ಇಟ್ಟಿರುವ 25 ಕೋಟಿ ರೂ.ಗಳಲ್ಲಿ ಬೇರೆ ಬೇರೆ ಜಿಲ್ಲೆ ಮತ್ತು ತಾಲ್ಲೂಕುಗಳಿಗೆ ಈಗಾಗಲೇ 21.53 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿರುತ್ತೇವೆ. ಅವರಿಗೆ ಅವಶ್ಯಕತೆಗೆ ತಕ್ಕಂತೆ ಎಷ್ಟು ಹಣ ಬಿಡುಗಡೆ ಮಾಡಬೇಕು ಅಷ್ಟು ಹಣವನ್ನು ಬಿಡುಗಡೆ ಮಾಡುತ್ತೇವೆ ಮತ್ತು ಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ಹೆಚ್.ಸಿ.ಬಾಲಕೃಷ್ಣ :– ಮಾನ್ಯ ಉಪಾಧ್ಯಕ್ಷರೆ, ರಾಮನಗರಕ್ಕೆ ಸಂಬಂಧಪಟ್ಟಂತೆ ಮುಖ್ಯ ಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುವುದೇನೆಂದರೆ, ಈ ವರ್ಷದ ಬಜೆಟ್‌ನಲ್ಲಿ ರಾಮನಗರ–ವನ್ನು ಕಡೆಗಣಿಸಿದ್ದಾರೆ ಮತ್ತು ಒಂದು ನಯಾಪೈಸೆಯನ್ನೂ ಕೂಡ

ಬಿಡುಗಡೆ ಮಾಡಿಲ್ಲ. ಕನಿಷ್ಠ ಅಲ್ಲಿರುವ ಡಿಸಿಯವರಿಗೆ ಮತ್ತು ಅಧಿಕಾರಿಗಳಿಗೆ ಕುಳಿತುಕೊಳ್ಳುವುದಕ್ಕೆ ಚೇರ್ ಮತ್ತು ಟೇಬಲ್‌ಗೆ 8 ಕೋಟಿ ರೂ.ಗಳನ್ನು ಕೊಡಿ ಎಂದು ಕೇಳಿದರೆ ನಾವು ಇಡೀ ರಾಜ್ಯಕ್ಕೆ ಇಟ್ಟಿರುವುದು 25 ಕೋಟಿ ರೂ.ಗಳು ನಾವು ವಿಚಾರ ಮಾಡಿ ನೋಡುತ್ತೇವೆಂದು ದಯಮಾಡಿ ಹೇಳುವುದು ಬೇಡ. 8 ಕೋಟಿ ರೂ.ಗಳನ್ನು ವಿಶೇಷ ಅನುದಾನದಲ್ಲಿ ಬಿಡುಗಡೆ ಮಾಡಿಕೊಡಬೇಕೆಂದು ನಾನು ತಮ್ಮ ಮೂಲಕ ಒತ್ತಾಯವನ್ನು ಮಾಡುತ್ತೇನೆ. ಅದಕ್ಕೆ ದಯಮಾಡಿ ಉಪ ಮುಖ್ಯ ಮಂತ್ರಿಯವರು ಹೇಳಬೇಕು. ರಾಮನಗರ ಜಿಲ್ಲೆಗೆ ನೀವು ಏನೂ ಕೊಟ್ಟಿಲ್ಲ, ಸಂಪೂರ್ಣವಾಗಿ ನೀವು ಕಡೆಗಣಿಸಿದ್ದೀರಿ. ಅಧಿಕಾರಿಗಳು ಕುಳಿತು-ಕೊಂಡು ಕೆಲಸ ಮಾಡುವುದಕ್ಕೆ ಚೇರ್ ಮತ್ತು ಟೇಬಲ್‌ಗೆ ಹಣ ಬಿಡುಗಡೆ ಮಾಡದಿದ್ದರೆ ಹೇಗೆ? ರೈತರ ಅರ್ಜಿಗಳನ್ನು ತೆಗೆದುಕೊಳ್ಳುವು-ದಕ್ಕಾದರೂ ಅಧಿಕಾರಿಗಳು ಕುಳಿತುಕೊಳ್ಳುವುದು ಬೇಡವೇ? ಈ ಸರ್ಕಾರ ಯೋಚನೆ ಮಾಡುತ್ತೇವೆಂದು ಹೇಳುವುದು ಬೇಡ. ದಯಮಾಡಿ ರಾಮನಗರಕ್ಕೆ ವಿಶೇಷ ಅನುದಾನದಲ್ಲಿ 8 ಕೋಟಿ ರೂ.ಗಳನ್ನು ಬಿಡುಗಡೆ ಮಾಡಬೇಕೆಂದು ನಾನು ತಮ್ಮ ಮೂಲಕ ಮನವಿಯನ್ನು ಮಾಡುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷರೆ, 8 ಕೋಟಿ ರೂ.ಗಳು ಚೇರ್ ಮತ್ತು ಟೇಬಲ್‌ಗೆ ಒಂದು ಮಿನಿ ವಿಧಾನಸೌಧಕ್ಕೆ ಬೇಕು ಎಂದು ಕೇಳಿದರೆ ಹೇಗೆ?

ಶ್ರೀ ಹೆಚ್.ಸಿ.ಬಾಲಕೃಷ್ಣ : ಒಂದಕ್ಕೇ ಅಲ್ಲ ಸರ್, ಎಲ್ಲಾದಕ್ಕೂ ಸೇರಿ.

ಶ್ರೀ ಕೆ.ಎಸ್.ಈಶ್ವರಪ್ಪ : ಎಲ್ಲದಕ್ಕೂ ಸೇರಿ ಎಷ್ಟು ಹಣ ಬೇಕಾಗಬಹುದು ಎನ್ನುವುದರ ಬಗ್ಗೆ ನಾನು ಜಿಲ್ಲಾಧಿಕಾರಿಗಳನ್ನು ಕರೆಸಿ ಚರ್ಚೆ ಮಾಡಿ ನಿಮ್ಮನ್ನು ಕರೆಯಿಸುತ್ತೇನೆ. ಎಷ್ಟು ಅವಶ್ಯಕತೆ ಇದೆ ಅವಶ್ಯಕತೆಗೆ ತಕ್ಕಂತೆ ಹಣ ಬಿಡುಗಡೆ ಮಾಡಿ ಕೊಡುತ್ತೇನೆ.

ಶ್ರೀ ಕೆ. ರಾಜು : ಮಾನ್ಯಉಪಾಧ್ಯಕ್ಷರೆ, ಪಾರ್ಟಿಷನ್ ಮಾಡುವುದು ಅವಶ್ಯಕತೆ ಇದೆ. ಪೀಠೋಪಕರಣ ಒಂದೇ ಅಲ್ಲ. ಪಾರ್ಟಿಷನ್ ಕೂಡ ಮಾಡಿಲ್ಲ.

ಉಪಾಧ್ಯಕ್ಷರು : ರಾಜುರವರೆ, ಸಚಿವರು ಸ್ಪಷ್ಟವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಎಷ್ಟು ಅವಶ್ಯಕತೆ ಇದೆ ಅಷ್ಟನ್ನು ಬಿಡುಗಡೆ ಮಾಡುತ್ತೇನೆಂದರೆ ಹೇಳಿದ್ದಾರೆ. ದಯವಿಟ್ಟು personaly ಕಾಂಟ್ಯಾಕ್ಟ್ ಮಾಡಿ.

ಶ್ರೀ ಕೆ. ರಾಜು : ಧನ್ಯವಾದಗಳು.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಕೈಗಾರಿಕೆ ಸ್ಥಾಪಿಸಲು ಭೂನಕ್ಷೆ ಮಂಜೂರಾತಿ

(47) 281

ಶ್ರೀ ನಾಗರಾಜು ಎಂ.ವಿ (ನೆಲಮಂಗಲ)

(ಅ) ಎ.ಸಿ.ಇ.ಡಿಸೈನರ್ಸ್ ಲಿಮಿಟೆಡ್, ಬೆಂಗಳೂರುರವರು ನೆಲಮಂಗಲ ತಾಲ್ಲೂಕು, ಗೋವೇನಹಳ್ಳಿ ಮತ್ತು ಮಿಣ್ಣಾಪುರ....ಗ್ರಾಮಗಳ ವ್ಯಾಪ್ತಿಯಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಕೈಗಾರಿಕೆಗೆ ಕೆ.ಐ.ಎ.ಡಿ.ಬಿ. ಅನುಮತಿ ಪತ್ರದಲ್ಲಿ ತಿಳಿಸಿರುವಂತೆ ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ಭೂನಕ್ಷೆಗೆ ಮಂಜೂರಾತಿ ಪಡೆದಿದ್ದಾರೆಯೇ;

(ಆ) ಹಾಗಿದ್ದಲ್ಲಿ, ಭೂನಕ್ಷೆಗೆ ಮಂಜೂರಾತಿ ನೀಡುವಾಗ ಯೋಜನೆ ಪ್ರಾಧಿಕಾರ ವಿಧಿಸಿರುವ ನಿಬಂಧನೆಗಳೇನು (ನಿಬಂಧನೆಗಳ ಪ್ರತಿಯನ್ನು ನೀಡುವುದು);

(ಇ) ಹಾಗಿಲ್ಲದಿದ್ದಲ್ಲಿ, ಸರ್ಕಾರ ಇವರ ಮೇಲೆ ಕೈಗೊಂಡಿರುವ ಕ್ರಮಗಳೇನು (ವಿವರಗಳನ್ನು ನೀಡುವುದು);

(ಈ) ಈ ಕೈಗಾರಿಕೆ ಸ್ಥಾಪನೆಗಾಗಿ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅನುಮೋದನೆ ಪಡೆದಿದೆಯೇ;

(ಉ) ಹಾಗಿಲ್ಲದಿದ್ದಲ್ಲಿ, ಈ ಕಂಪನಿಯವರ ಮೇಲೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು (ಪೂರ್ಣ ವಿವರಗಳನ್ನು ನೀಡುವುದು)?

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು)

(ಅ) ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ನಕ್ಷೆಗೆ ಮಂಜೂರಾತಿ ಪಡೆದಿರುವುದಿಲ್ಲ.

(ಆ) ಅನ್ವಯಿಸಿರುವುದಿಲ್ಲ.

(ಇ) ಅನ್ವಯಿಸುವುದಿಲ್ಲ.